# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 352

ಸದಸ್ಯರ ಹೆಸರು : ಶ್ರೀ ಕೆ.ಎಸ್. ನವೀನ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-12-2024

| | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಹೊಸ ವಾಹನಗಳು ನೋಂದಣಿಯಾಗುತ್ತಿದೆ; (ವಾಹನಗಳ ಮಾಹೆವಾರು ವಿವರ ನೀಡುವುದು) | ಬೆಂಗಳೂರು ನಗರದಲ್ಲಿ ಪ್ರತಿ ಮಾಹೆ ಸರಾಸರಿ ಸುಮಾರು 60,000 ಹೊಸ ವಾಹನಗಳು ನೋಂದಣಿಯಾಗುತ್ತಿರುತ್ತವೆ. ಏಪ್ರಿಲ್-2023 ರಿಂದ ಅಕ್ಟೋಬರ್-2024 ರವರೆಗಿನ ಮಾಹೆವಾರು ನೋಂದಣಿಯಾದ ವಾಹನಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ. | ಬೆಂಗಳೂರು ನಗರದಲ್ಲಿ ತಿಂಗಳಿಗೆ ವಾಹನಗಳ ಮೇಲೆ ಎಷ್ಟು ದಂಡ ವಿಧಿಸಲಾಗುತ್ತಿದೆ; ತಿಂಗಳಿಗೆ ವಸೂಲಿಯಾಗುತ್ತಿರುವ ದಂಡ ಎಷ್ಟು; (ವಿವರ ಒದಗಿಸುವುದು) | ಬೆಂಗಳೂರು ನಗರದಲ್ಲಿ ತಿಂಗಳಿಗೆ ವಾಹನಗಳ ಮೇಲೆ ಎಷ್ಟು ದಂಡ ವಿಧಿಸಲಾಗುತ್ತಿರುವ, ತಿಂಗಳಿಗೆ ವಸೂಲಿಯಾಗುತ್ತಿರುವ ದಂಡದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ. | ಸಾರಿಗೆ ಇಲಾಖೆಗೆ ಹೊಸ ನೋಂದಣಿಯಿಂದ ಎಷ್ಟು ತೆರಿಗೆ ಬರುತ್ತಿದೆ; ಬೆಂಗಳೂರು ಸಾರಿಗೆ ಇಲಾಖೆಯಲ್ಲಿ ಅಕ್ರಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಕ್ರಮದ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಸಾರಿಗೆ ಇಲಾಖೆಯಲ್ಲಿ ಸಾರಿಗೆ ಮತ್ತು ಸಾರಿಗೇತರ ವಾಹನಗಳ ಹೊಸ ನೋಂದಣಿಯಿಂದ 2023-24ನೇ ಸಾಲಿನಲ್ಲಿ ರೂ.8,742.56 ಕೋಟಿಗಳ ತೆರಿಗೆ ಸಂಗ್ರಹವಾಗಿರುತ್ತದೆ. 2024-25ನೇ ಸಾಲಿನಲ್ಲಿ (ಏಪ್ರಿಲ್-2024 ರಿಂದ ಅಕ್ಟೋಬರ್-2024ನೇ ಮಾಹೆಯವರೆಗೆ) ರೂ.5,162.58 ಕೋಟಿಗಳ ತೆರಿಗೆ ಸಂಗ್ರಹವಾಗಿರುತ್ತದೆ.<br>1. ಸಾರಿಗೆ ಇಲಾಖೆಯ ಬೆಂಗಳೂರು (ಕೇಂದ್ರ) ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿನ ಸಾರಿಗೇತರ ವಾಹನಗಳ ಹೊಸ ನೋಂದಣಿ ಸಮಯದಲ್ಲಿ ಆಗಿರುವ ತೆರಿಗೆ ವಂಚನೆ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>2. ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಸಮಗ್ರ ಆಡಿಟ್ ವರದಿ ಸಲ್ಲಿಸಲು ಮಹಾಲೇಖಪಾಲರಿಗೆ ಕೋರಲಾಗಿತ್ತು. ಮಹಾಲೇಖಪಾಲರು ಸದರಿ ಕಛೇರಿಯ ಆಡಿಟ್ ನಡೆಸಿ 2022-23 ರ ತನಿಖಾ ವರದಿಯಲ್ಲಿ ಸಾರಿಗೇತರ ವಾಹನಗಳ ಹೊಸ ನೋಂದಣಿ ಸಮಯದಲ್ಲಿ ಆಗಿರುವ ತೆರಿಗೆ ವಂಚನೆ ಬಗ್ಗೆ ನಮೂದಿಸಿದ್ದಾರೆ. ಸದರಿ ವರದಿಯಲ್ಲಿ ತೆರಿಗೆ ವಂಚನೆಯ ಪ್ರಮಾಣವು ರೂ.15,29,75,979/- ಗಳಷ್ಟಿರುತ್ತದೆ. ಈ ಪ್ರಕರಣದ ಬಗ್ಗೆ ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ಮೊ.ನಂ.390/2024 ಕಲಂ 34, 120ಬಿ, 406, 408, 409, 420 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಲಾಗಿದ್ದು, ತನಿಖೆಯು ಪ್ರಗತಿಯಲ್ಲಿದೆ.<br>3. ಸದರಿ ಪ್ರಕರಣದ ಬಗ್ಗೆ ತನಿಖೆಯನ್ನು ಅಪರಾಧ ತನಿಖಾ ದಳಕ್ಕೆ (ಸಿ.ಐ.ಡಿ.) ವಹಿಸಲು ನಿರ್ಧರಿಸಿ, ಒಳಾಡಳಿತ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ. |

| | ಪ್ರಶ್ನೆ | ಉತ್ತರ |
|---|---|---|
| | | 4. ಸದರಿ ಪ್ರಕರಣದಲ್ಲಿನ 1471 ವಾಹನಗಳ ತೆರಿಗೆ ಪಾವತಿ ಬಗ್ಗೆ ಪರಿಶೀಲಿಸಿಕೊಂಡು, ಪಾವತಿಸದೇ ಇರುವ ವಾಹನಗಳ ತೆರಿಗೆಯನ್ನು ವಸೂಲು ಮಾಡಲು ಪ್ರವರ್ತನ ತಂಡವನ್ನು ರಚಿಸಿ ಕೂಡಲೇ ಕ್ರಮ ಕೈಗೊಂಡು 15 ದಿನಗಳೊಳಗಾಗಿ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ) ವಿಭಾಗ, ಬೆಂಗಳೂರು ಇವರಿಗೆ ಸೂಚಿಸಲಾಗಿದೆ. |
| ಈ. | ಬೆಂಗಳೂರು ಪೀಣ್ಯ ಹತ್ತಿರ ನಿರ್ಮಾಣಗೊಂಡಿರುವ ಬಸವಣ್ಣ ಬಸ್ ನಿಲ್ದಾಣ ಉಪಯೋಗವಾಗದೇ ಇರಲು ಕಾರಣವೇನು; ಈ ಬಸ್ ನಿಲ್ದಾಣ ಉಪಯೋಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು) | ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ದಿನಾಂಕ: 21.08.2014 ರಂದು ನೂತನವಾಗಿ ಬಸವೇಶ್ವರ ಬಸ್ ನಿಲ್ದಾಣ (ಪೀಣ್ಯ) ವನ್ನು ಪ್ರಾರಂಭಿಸಿ, ಮೊದಲನೇ ಹಂತವಾಗಿ ಕೆಂಪೇಗೌಡ ಬಸ್ ನಿಲ್ದಾಣದಿಂದ ದಾವಣಗೆರೆ-ಹುಬ್ಬಳ್ಳಿ, ಚಿತ್ರದುರ್ಗ, ಹೊಸಪೇಟೆ ಹಾಗೂ ಬಳ್ಳಾರಿ ವಲಯಗಳಿಗೆ ಮತ್ತು ತುಮಕೂರು, ಪಾವಗಡ, ಹಾಸನ, ಚಿಕ್ಕಮಗಳೂರು, ಮಂಗಳೂರು ಮುಂತಾದ ಭಾಗಗಳಿಗೆ ಕಾರ್ಯಾಚರಣೆ ಮಾಡುತ್ತಿದ್ದ ಸಾರಿಗೆಗಳನ್ನು ಎರಡನೇ ಹಂತದಲ್ಲಿ ಬಸವೇಶ್ವರ ಬಸ್ ನಿಲ್ದಾಣ (ಪೀಣ್ಯ) ಕ್ಕೆ ವರ್ಗಾಯಿಸಿ, ಪ್ರತಿನಿತ್ಯ 1063 ಸರತಿಗಳನ್ನು ಬಸವೇಶ್ವರ ಬಸ್ ನಿಲ್ದಾಣದಿಂದ ನಿರ್ಗಮಿಸಿ ಕಾರ್ಯಾಚರಿಸಲಾಗುತ್ತಿತ್ತು.<br>ಆದರೆ, ಬಸವೇಶ್ವರ ಬಸ್ ನಿಲ್ದಾಣ (ಪೀಣ್ಯ) ದಿಂದ ನಿರ್ಗಮಿಸುತ್ತಿದ್ದ ಸಾರಿಗೆಗಳಿಗೆ ಸಾರ್ವಜನಿಕ ಪ್ರಯಾಣಿಕರಿಂದ ಉತ್ತೇಜನ ದೊರೆಯದೇ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಖಾಸಗಿ ಪ್ರವರ್ತಕರ ಸಾರಿಗೆಗಳು ಕೆಂಪೇಗೌಡ ಬಸ್ ನಿಲ್ದಾಣ ಸುತ್ತಮುತ್ತಲಿನ ಪ್ರದೇಶಗಳಿಂದ ಕಾರ್ಯಾಚರಣೆ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಪ್ರಯಾಣಿಕರು ಖಾಸಗಿ ಸಾರಿಗೆಗಳತ್ತ ಆಕರ್ಷಿತರಾಗಿದ್ದರಿಂದ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ನಿಗಮ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟಾರೆ ಅಂದಾಜು ರೂ.11.00 ಕೋಟಿ (ದಿನಾಂಕ:10.09.20214 ರಿಂದ ಫೆಬ್ರುವರಿ-2015ರ ಅಂತ್ಯಕ್ಕೆ) ನಷ್ಟವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:29.01.2015 ರಂದು ನಡೆದ ಸಭೆಯ ತೀರ್ಮಾನದಂತೆ ಖಾಸಗಿ ವಾಹನಗಳನ್ನು ಮೆಜೆಸ್ಟಿಕ್ ಪ್ರದೇಶದಲ್ಲಿ ನಿರ್ಬಂಧಿಸುವವರೆಗೆ ಕೆಂಪೇಗೌಡ ಬಸ್ ನಿಲ್ದಾಣದಿಂದ ಶ್ರೀ ಬಸವೇಶ್ವರ ಬಸ್ ನಿಲ್ದಾಣಕ್ಕೆ ವರ್ಗಾಯಿಸಿದ್ದ ಸಾರಿಗೆಗಳನ್ನು ದಿನಾಂಕ:01.03.2015 ರಿಂದ ಜಾರಿಗೆ ಬರುವಂತೆ ಪುನಃ ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರಾರಂಭಿಸಿ ಶ್ರೀ ಬಸವೇಶ್ವರ ಬಸ್ ನಿಲ್ದಾಣದ ಮೂಲಕ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಯಿತು. ಬಸವೇಶ್ವರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಲಭ್ಯತೆ ತೀರ ವಿರಳವಾದ್ದರಿಂದ 03 ತಿಂಗಳ ನಂತರ ಸದರಿ ಸಾರಿಗೆಗಳನ್ನು ನೇರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಯಿತು.<br>ಸದರಿ ಬಸ್ ನಿಲ್ದಾಣವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಚಿತ್ರದುರ್ಗ-ಹೊಸಪೇಟೆ, ದಾವಣಗೆರೆ-ಹುಬ್ಬಳ್ಳಿ, ಶಿವಮೊಗ್ಗ, ಹಾಸನ ವಲಯಗಳಿಗೆ ಕೆಂಪೇಗೌಡ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡುತ್ತಿದ್ದ 60 ಸಾರಿಗೆ ನಿರ್ಗಮನಗಳನ್ನು ದಿನಾಂಕ:12.04.2018 ರಿಂದ ಜಾರಿಗೆ ಬರುವಂತೆ ಶ್ರೀ ಬಸವೇಶ್ವರ ಬಸ್ ನಿಲ್ದಾಣಕ್ಕೆ ವರ್ಗಾಯಿಸಿ, ಅಲ್ಲಿಂದಲೇ |

| | ಪ್ರಶ್ನೆ | ಉತ್ತರ |
|---|---|---|
| | | ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಯಿತು. ಸದರಿ ಅನುಸೂಚಿಗಳ ಸಾರಿಗೆ ಆದಾಯ ಕುಂಠಿತಗೊಂಡಿದ್ದರಿಂದ, ದಿನಾಂಕ:10.09.2018 ರಿಂದ ಜಾರಿಗೆ ಬರುವಂತೆ ಪುನಃ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ವರ್ಗಾಯಿಸಿ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಯಿತು.<br><br>ಪೀಣ್ಯದಲ್ಲಿರುವ ಶ್ರೀ ಬಸವೇಶ್ವರ ಬಸ್ ನಿಲ್ದಾಣಕ್ಕೆ ಸಾರ್ವಜನಿಕ ಪ್ರಯಾಣಿಕರಿಂದ ಸೂಕ್ತ ಮನ್ನಣೆ ದೊರೆಯದೆ ಬಸ್ ನಿಲ್ದಾಣವು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆಗೊಳ್ಳುತ್ತಿಲ್ಲ. ಬೆಂಗಳೂರು ಕೇಂದ್ರ ಭಾಗದಲ್ಲಿನ ವಾಹನ ದಟ್ಟಣೆ ಮತ್ತು ವಾಯುಮಾಲಿನ್ಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಖಾಸಗಿ ಬಸ್‌ಗಳನ್ನೂ ನಗರದ ಹೊರಭಾಗಕ್ಕೆ ವರ್ಗಾಯಿಸಿದ ನಂತರ ಸಾರಿಗೆ ನಿಗಮದ ಬಸ್‌ಗಳನ್ನು ಸದರಿ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡುವುದು ಸೂಕ್ತವಾಗಿರುತ್ತದೆ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿನ ಪೀಣ್ಯದಲ್ಲಿನ ಬಸವೇಶ್ವರ ಬಸ್ ನಿಲ್ದಾಣದಲ್ಲಿನ ವಾಣಿಜ್ಯ ಸ್ಥಳಕ್ಕೆ ಮಹಡಿವಾರು ಸ್ಥಳಾವಕಾಶ / ಒಟ್ಟಾರೆ ವಿಸ್ತೀರ್ಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಂಬಂಧ, ನಿಗಮದ ನಿಯಮಾವಳಿಗಳನ್ವಯ ಟೆಂಡರ್ / ಸಂಧಾನ ಆಹ್ವಾನಿಸಲು ಕ್ರಮ ವಹಿಸಲಾಗುತ್ತಿದೆ. |

**ಟಿಡಿ 47 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 278 (352)ಕ್ಕೆ ಸಂಬಂಧಿಸಿದ**

**ಅನುಬಂಧ-1**

| 2023-24ನೇ ಸಾಲಿನ ಮಾಹೆವಾರು ವಿವರ | | 2024-25 ನೇ ಸಾಲಿನ ಮಾಹೆವಾರು ವಿವರ | |
|---|---|---|---|
| ಏಪ್ರಿಲ್ 2023 | 53,109 | ಏಪ್ರಿಲ್ 2024 | 52,228 |
| ಮೇ 2023 | 58,676 | ಮೇ 2024 | 60,693 |
| ಜೂನ್ 2023 | 60,821 | ಜೂನ್ 2024 | 62,393 |
| ಜುಲೈ 2023 | 57,304 | ಜುಲೈ 2024 | 61,717 |
| ಆಗಸ್ಟ 2023 | 63,364 | ಆಗಸ್ಟ 2024 | 69,523 |
| ಸೆಪ್ಟೆಂಬರ್ 2023 | 59,208 | ಸೆಪ್ಟೆಂಬರ್ 2024 | 56,906 |
| ಅಕ್ಟೋಬರ್ 2023 | 62,188 | ಅಕ್ಟೋಬರ್ 2024 | 76,509 |
| ನವೆಂಬರ್ 2023 | 62,883 | | |
| ಡಿಸೆಂಬರ್ 2023 | 48,830 | | |
| ಜನವರಿ 2024 | 67,546 | | |
| ಫೆಬ್ರುವರಿ 2024 | 62,019 | | |
| ಮಾರ್ಚ್ 2024 | 69,649 | | |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 278 (352)ಕ್ಕೆ ಸಂಬಂಧಿಸಿದ ಅನುಬಂಧ-2**

ಸಾರಿಗೆ ಇಲಾಖೆಯು ಮೋಟಾರು ವಾಹನಗಳ ಕಾಯ್ದೆ, 1988 ರ ಕಲಂ 200 ರಡಿ (ಪ್ರತಿ ಲಗತ್ತಿಸಿದೆ) ನಿಗದಿಪಡಿಸಿರುವಂತೆ ವಿವಿಧ ಸಂಚಾರಿ ಅಪರಾಧಗಳಿಗೆ ದಂಡಗಳನ್ನು ವಿಧಿಸಲಾಗುತ್ತಿದ್ದು, ಬೆಂಗಳೂರು ನಗರದಲ್ಲಿ ದಿನಾಂಕ:01-04-2023 ರಿಂದ 30-10-2024 ರ ವರೆಗೆ ಸಂಗ್ರಹಿಸಿರುವ ದಂಡಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರಮ ಸಂಖ್ಯೆ | ಮಾಹೆ | ದಾಖಲಿಸಿದ ಪ್ರಕರಣಗಳು | ಸಂಗ್ರಹಿಸಿದ ದಂಡ (ರೂ.ಗಳಲ್ಲಿ) |
|---|---|---|---|
| 1 | ಏಪ್ರಿಲ್-2023 | 5620 | 26464013 |
| 2 | ಮೇ-2023 | 2830 | 18405440 |
| 3 | ಜೂನ್-2023 | 2882 | 16932244 |
| 4 | ಜುಲೈ-2023 | 3612 | 18270544 |
| 5 | ಆಗಸ್ಟ್-2023 | 4020 | 16780277 |
| 6 | ಸೆಪ್ಟೆಂಬರ್-2023 | 3042 | 15047142 |
| 7 | ಅಕ್ಟೋಬರ್-2023 | 3966 | 17293953 |
| 8 | ನವೆಂಬರ್-2023 | 3879 | 17997412 |
| 9 | ಡಿಸೆಂಬರ್-2023 | 3648 | 18943499 |
| 10 | ಜನವರಿ-2024 | 3469 | 16183563 |
| 11 | ಫೆಬ್ರುವರಿ-2024 | 3185 | 19278888 |
| 12 | ಮಾರ್ಚ್ -2024 | 3617 | 15805991 |
| 13 | ಏಪ್ರಿಲ್-2024 | 3820 | 10923252 |
| 14 | ಮೇ-2024 | 4202 | 18473122 |
| 15 | ಜೂನ್-2024 | 4286 | 22692104 |
| 16 | ಜುಲೈ-2024 | 4331 | 41348949 |
| 17 | ಆಗಸ್ಟ್-2024 | 4089 | 47157940 |
| 18 | ಸೆಪ್ಟೆಂಬರ್-20243 | 4302 | 27463492 |
| 19 | ಅಕ್ಟೋಬರ್-2024 | 3720 | 17735257 |